ಕೋಟಿ ಖರ್ಚು ಮಾಡಿದರು.

ಇದು ಯಾವುದೂ ವ್ಯರ್ಥವಾಗಲಿಲ್ಲ. ಒಲಿಂಪಿಕ್ಸ್‌ನ ಕೊನೆಯ ದಿನ ನೀವೆಲ್ಲ ನನ್ನ ದೇಶಕ್ಕೆ ಭೇಷ್ ಎಂದು ನಮ್ಮ ಶ್ರಮಕ್ಕೆ ಗೌರವ ಸಲ್ಲಿಸಿದ್ದೀರಿ. ಈ ಮೂಲಕ ಒಲಿಂಪಿಕ್ಸ್ ಯಶಸ್ಸು ಕಾಣಲು ನೀವೆಲ್ಲರೂ ಕಾರಣರಾಗಿದ್ದೀರಿ. ಹೀಗಾಗಿ ಇದು ನಿಮ್ಮೆಲ್ಲರ ಯಶಸ್ಸು. ಕೋವಿಡ್ ಕಷ್ಟದ ಕಾಲದಲ್ಲಿಯೂ ನೀವು ತೋರಿದ ಕಾಳಜಿ, ನನ್ನ ಮೇಲಿಟ್ಟ ಪ್ರೀತಿಗೆ ಚಿರಋಣಿ. ಒಲಿಂಪಿಕ್ಸ್‌ನ ಮೂಲ ಆಶಯವೇ ಮಾನವ ಜಾತಿ ತಾನೊಂದೆ ವಲಂ ಎನ್ನುವುದು. ಈ ಮಾತು ಈಗ ಸಾರ್ಥಕವಾದ ಸಂತೃಪ್ತಿ ನನ್ನದು.

ನಾನಿನ್ನು ಹೋಗಿಬರುವೆ, 2024ರಲ್ಲಿ ಪ್ಯಾರಿಸ್‌ನಲ್ಲಿ ಭೇಟಿಯಾಗೋಣ.

–ಇಂತಿ ನಿಮ್ಮ ಪ್ರೀತಿಯ
ಟೋಕಿಯೊ ಒಲಿಂಪಿಕ್ಸ್



ಟೋಕಿಯೊಗೆ ಬೈ ಬೈ... ಒಲಿಂಪಿಕ್ಸ್ ಸಮಾರೋಪದಲ್ಲಿ ಪ್ರಜ್ವಲಿಸಿದ ಬೆಳಕು

ಬೋರ್ಗೊಹೈನ್ ಕ್ರೀಡಾ ಕುಟುಂಬದಿಂದ ಬಂದವರು. ಲವ್ಲಿನಾ ತಂದೆ ಸಣ್ಣ ಉದ್ಯಮಿ. ಅವರಿಗೆ ಮೂವರು ಹೆಣ್ಣುಮಕ್ಕಳು. ಲವ್ಲಿನಾ ಅವಳಿ ಸಹೋದರಿಯರಾದ ಲಿಚಾ ಮತ್ತು ಲಿಮಾ ರಾಷ್ಟ್ರೀಯ ಮಟ್ಟದ ಕಿಕ್ ಬಾಕ್ಸಿಂಗ್‌ನಲ್ಲಿ ತೊಡಗಿಕೊಂಡಿದ್ದಾರೆ. ಕುಟುಂಬದ ನಿರ್ವಹಣೆ ಹಾಗೂ ಮಕ್ಕಳ ಕ್ರೀಡಾ ಸಾಧನೆಗೆ ಹಣ ಹೊಂದಿಸುವುದು ಟಿಕೆನ್ ಅವರಿಗೆ ಕಷ್ಟವಾಗಿತ್ತು.

ಆರ್ಥಿಕ ಸಂಕಷ್ಟದ ನಡುವೆಯೂ ಕಿಕ್ ಬಾಕ್ಸಿಂಗ್‌ನಿಂದ ಬಾಕ್ಸಿಂಗ್‌ನತ್ತ ಹೊರಳಿದ ಲವ್ಲಿನಾ ಶಾಲಾ ಹಂತದಲ್ಲಿ ಓದುವಾಗ ಭಾರತ ಕ್ರೀಡಾ ಪ್ರಾಧಿಕಾರ ಆಯೋಜಿಸಿದ್ದ ಟ್ರಯಲ್ಸ್‌ನಲ್ಲಿ ಆಯ್ಕೆಯಾದರು. ಗುವಾಹಟಿಯಲ್ಲಿ ತರಬೇತಿಗೂ ಅವಕಾಶ ಪಡೆದರು. ಇದು ಲವ್ಲಿನಾ ಕ್ರೀಡಾ ಬದುಕಿಗೆ ಹೊಸ ದಿಕ್ಕು ತೋರಿತು. 23 ವರ್ಷದ ಈ ಬಾಕ್ಸರ್ ವಿಶ್ವ ಚಾಂಪಿಯನ್‌ಷಿಪ್, ಏಷ್ಯನ್ ಚಾಂಪಿಯನ್‌ಷಿಪ್‌ಗಳಲ್ಲಿಯೂ ಕಂಚಿನ ಪದಕಗಳನ್ನೇ ಜಯಿಸಿದ್ದರು. ಒಲಿಂಪಿಕ್ಸ್‌ನಲ್ಲಿಯೂ ಕಂಚು ಲಭಿಸಿತು.

### ಕುಸ್ತಿಯಲ್ಲಿ ಕಮಾಲ್

ಒಲಿಂಪಿಕ್ಸ್‌ನಲ್ಲಿ ಭಾರತ ಹಾಕಿ ಹೊರತು ಪಡಿಸಿದರೆ ಹೆಚ್ಚು ಪದಕಗಳನ್ನು ಜಯಿಸಿದ್ದು ಕುಸ್ತಿಯಲ್ಲಿ. ಟೋಕಿಯೊದಲ್ಲಿಯೂ ಕುಸ್ತಿ ಕಮಾಲ್ ಮುಂದುವರಿಯಿತು. ಫ್ರೀಸ್ಟೈಲ್‌ನ 57 ಕೆ.ಜಿ. ವಿಭಾಗದಲ್ಲಿ ರವಿಕುಮಾರ್ ದಹಿಯಾ ಬೆಳ್ಳಿ ಮತ್ತು 65 ಕೆ.ಜಿ. ವಿಭಾಗದಲ್ಲಿ ಬಜರಂಗ್ ಪೂನಿಯಾ ಕಂಚು ಗೆದ್ದುಕೊಂಡರು.

ಸಣ್ಣ ರೈತರಾಗಿದ್ದ ರಾಕೇಶ್ ದಹಿಯಾ ಅವರ ಪುತ್ರ ರವಿಕುಮಾರ್ ಹರಿಯಾಣದ ಸೋನಿಪತ್ ಜಿಲ್ಲೆಯ ನಾಹ್ರಿ ಗ್ರಾಮದವರು. ತಮ್ಮೂರಿನಿಂದ ನಿತ್ಯ 8–10 ಕಿ.ಮೀ. ತೆರಳಿ ಹಾಲು ಹಾಗೂ ಹಣ್ಣುಗಳನ್ನು ಮನೆಮನೆಗೆ ಕೊಟ್ಟು ಬರುತ್ತಿದ್ದರು. ಉಳಿದ ಹಾಲು ಮತ್ತು ಹಣ್ಣುಗಳೇ ಮಗನ ಕುಸ್ತಿ ಕಸರತ್ತಿಗೆ ಆಹಾರವಾಗಿತ್ತು.

1982ರ ಏಷ್ಯನ್ ಕ್ರೀಡಾಕೂಟದಲ್ಲಿ ಚಿನ್ನದ ಪದಕ ಜಯಿಸಿದ್ದ ಸತ್ಪಾಲ್ ಸಿಂಗ್ ಗರಡಿಯಲ್ಲಿ ಪಳಗಿದ ರವಿಕುಮಾರ್ ಹೋದ ವರ್ಷ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಎರಡು ಚಿನ್ನ ಗೆದ್ದಿದ್ದರು.

ಪೂನಿಯಾ ಕುಟುಂಬಕ್ಕೆ ಕುಸ್ತಿ ಹಣ ಗಳಿಕೆಯ ಮಾರ್ಗವಲ್ಲ. ಸಾಂಪ್ರದಾಯಿಕ ಶೈಲಿಯಲ್ಲಿ ಉಚಿತವಾಗಿ ಈ ಕ್ರೀಡೆ ಹೇಳಿಕೊಡುತ್ತಿದ್ದಾರೆ. ಇದೇ ಕುಟುಂಬದಿಂದ ಬಂದ ಬಜರಂಗ್ ಪೂನಿಯಾ ಒಲಿಂಪಿಕ್ಸ್‌ನಲ್ಲಿ ಪದಕ ಜಯಿಸಿದ್ದಾರೆ. ಬಜರಂಗ್ ಶಾಲೆ ಬಿಟ್ಟು ಕುಸ್ತಿ ಆಡುವುದರಲ್ಲಿ ಹೆಚ್ಚಿನ ಸಮಯ ಕಳೆಯುತ್ತಿದ್ದರು. ಇವರ ಕುಟುಂಬ 2015ರಲ್ಲಿ ಸೋನೆಪತ್‌ಗೆ ವಲಸೆ ಹೋಯಿತು. ಅಲ್ಲಿರುವ ಭಾರತ ಕ್ರೀಡಾ ಪ್ರಾಧಿಕಾರದ ಪ್ರಾದೇಶಿಕ ಕೇಂದ್ರದಲ್ಲಿ ಬಜರಂಗ್ ತರಬೇತಿ ಪಡೆಯುವ ಅವಕಾಶ ಪಡೆದರು. ಸದ್ಯಕ್ಕೆ ಅವರು ಭಾರತೀಯ ರೈಲ್ವೆಯಲ್ಲಿ ಅಧಿಕಾರಿಯಾಗಿದ್ದು, ತಮ್ಮೂರಿನ ಮಕ್ಕಳಿಗೂ ಕುಸ್ತಿ ಕಲಿಸುತ್ತಿದ್ದಾರೆ.

### ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಪದಕ ಗೆದ್ದ ಭಾರತೀಯರು

| ಕ್ರೀಡಾಪಟು | ಕ್ರೀಡೆ | ಪದಕ |
|---|---|---|
| ನೀರಜ್ ಚೋಪ್ರಾ | ಜಾವೆಲಿನ್ ಎಸೆತ | ಚಿನ್ನ |
| ಮೀರಾಬಾಯಿ ಚಾನು | ವೇಟ್ ಲಿಫ್ಟಿಂಗ್ | ಬೆಳ್ಳಿ |
| ರವಿಕುಮಾರ್ ದಹಿಯಾ | ಕುಸ್ತಿ | ಬೆಳ್ಳಿ |
| ಪಿ.ವಿ.ಸಿಂಧು | ಬ್ಯಾಡ್ಮಿಂಟನ್ | ಕಂಚು |
| ಲವ್ಲಿನಾ ಬೋರ್ಗೊಹೈನ್ | ಬಾಕ್ಸಿಂಗ್ | ಕಂಚು |
| ಭಾರತ ತಂಡ | ಹಾಕಿ | ಕಂಚು |
| ಬಜರಂಗ್ ಪೂನಿಯಾ | ಕುಸ್ತಿ | ಕಂಚು |

ಪದಕಗಳನ್ನು ಗೆದ್ದ ಸಾಧಕರನ್ನು ಹೊರತುಪಡಿಸಿ ಗಾಲ್ಫ್‌ನಲ್ಲಿ ಅದಿತಿ ಅಶೋಕ್ ಹೊಸ ಅಲೆ ಹುಟ್ಟು ಹಾಕಿದರು. ಸದಾ ಕಳಪೆ ಪ್ರದರ್ಶನದಿಂದ ಟೀಕೆಗೆ ಒಳಗಾಗುತ್ತಿದ್ದ ಭಾರತ ಮಹಿಳಾ ಹಾಕಿ ತಂಡ ಸೆಮಿಫೈನಲ್ ಪ್ರವೇಶಿಸಿ ಕ್ರೀಡಾಪ್ರೇಮಿಗಳ ಮನಗೆದ್ದಿತು. ಪದಕ ನಿರೀಕ್ಷಿಸಿದ್ದ ಶೂಟಿಂಗ್‌ನಲ್ಲಿ ನಿರಾಸೆ ಎದುರಾಯಿತು. ಒಂದೇ ಒಲಿಂಪಿಕ್ಸ್‌ನಲ್ಲಿ ಏಳು ಪದಕಗಳನ್ನು ಜಯಿಸಿ ಭಾರತ ದಾಖಲೆ ಬರೆಯಿತು. 2012ರ ಲಂಡನ್ ಕೂಟದಲ್ಲಿ ಆರು ಪದಕಗಳನ್ನು ಜಯಿಸಿದ್ದು ಹಿಂದಿನ ಉತ್ತಮ ಸಾಧನೆಯಾಗಿತ್ತು.

130 ಕೋಟಿಗೂ ಹೆಚ್ಚು ಜನಸಂಖ್ಯೆ ಹೊಂದಿರುವ ಭಾರತ ಒಲಿಂಪಿಕ್ಸ್‌ನಂಥ ವಿಶ್ವ ಶ್ರೇಷ್ಠ ಕ್ರೀಡಾಕೂಟದಲ್ಲಿ ಇನ್ನೂ ಉತ್ತಮಸಾಮರ್ಥ್ಯ ತೋರಬೇಕು. ಹೆಚ್ಚು ಪದಕಗಳನ್ನು ಗೆಲ್ಲಬೇಕು.

ಇದಕ್ಕೂ ಮೊದಲು ಭಾರತದಲ್ಲಿ ಗ್ರಾಮೀಣ ಮಟ್ಟದಿಂದ ಕ್ರೀಡಾ ಸೌಲಭ್ಯಗಳನ್ನು, ಮುಖ್ಯವಾಗಿ ಮೈದಾನಗಳನ್ನು ನಿರ್ಮಿಸುವ ಕೆಲಸವಾಗಬೇಕಿದೆ. ವೃತ್ತಿಪರತೆ ಹೆಚ್ಚಿಸಿ, ಪ್ರತಿಭೆಗಳು ವಲಸೆ ಹೋಗುವುದನ್ನು ತಪ್ಪಿಸಬೇಕಿದೆ. ಆಗ ಮಾತ್ರ ಒಲಿಂಪಿಕ್ಸ್ ಪದಕ ಪಟ್ಟಿಯಲ್ಲಿ ಸದಾ ಪ್ರಾಬಲ್ಯ ಮೆರೆಯುವ ಅಮೆರಿಕ, ಚೀನಾ, ಜಪಾನ್, ಗ್ರೇಟ್ ಬ್ರಿಟನ್, ಆಸ್ಟ್ರೇಲಿಯಾ, ನೆದರ್ಲೆಂಡ್ಸ್ ದೇಶಗಳಿಗೆ ಸವಾಲೊಡ್ಡಲು ಸಾಧ್ಯವಾಗುತ್ತದೆ. ಜನಸಂಖ್ಯೆಯಲ್ಲಿ ನಮಗಿಂತಲೂ ಚಿಕ್ಕರಾಷ್ಟ್ರಗಳು ಒಲಿಂಪಿಕ್ಸ್‌ಗೆ ಆತಿಥ್ಯ ವಹಿಸಲು ತೋರುತ್ತಿರುವ ಆಸಕ್ತಿಯನ್ನು ಭಾರತ ಸವಾಲಾಗಿ ಸ್ವೀಕರಿಸಿ ಒಮ್ಮೆಯಾದರೂ ‘ಹಬ್ಬ’ಕ್ಕೆ ಎಲ್ಲ ರಾಷ್ಟ್ರಗಳನ್ನು ಆಹ್ವಾನಿಸಿ ಆತಿಥ್ಯ ಉಣಬಡಿಸುವ ಕೆಲಸವನ್ನು ತುರ್ತಾಗಿ ಮಾಡಬೇಕಿದೆ.

ಪ್ರತಿಕ್ರಿಯಿಸಿ: feedback@sudha.co.in